

ಹಾಳಾಗದಂತೆ ನಾವು ಕಾಳಜಿ ವಹಿಸುತ್ತೇವೆ' ಎಂದು ವಿವರಿಸುತ್ತಾರೆ ಶ್ರೀಧರ್. ಅವರು ಹಾಫ್ ಸ್ಸಾರಿ ತಯಾರಿಕೆಯಲ್ಲೂ ಸಿದ್ಧಹಸ್ತರು! ಒಂದೇ ಸೀರೆಯಲ್ಲಿಎರಡು ವ್ಯತಿರಿಕ್ತ ಬಣ್ಣಗಳಿಂದಾಗಿ ಅಂತಹ ಉತ್ಪನ್ನದ ಕಡೆಗೆ ಯುವ ಪೀಳಿಗೆಯು ಒಲವು ತೋರುತ್ತಿದೆ!

ನೈಪುಣ್ಯದ ನೇಯ್ಗೆ

ಸಾಂಪ್ರದಾಯಿಕವಾಗಿ ನೇಯ್ಗೆಮಾಡಲಾಗುವ ಇಂತಹ ಒಂದು ಸೀರೆಯ ತಯಾರಿಕೆಗೆ ಇಬ್ಬರು ವ್ಯಕ್ತಿಗಳು ನಿರಂತರ ಸುಮಾರು 45 ದಿನಗಳು ಕೆಲಸ ಮಾಡಬೇಕಾಗುತ್ತದೆ (ಸೀರೆಯ ವೈವಿಧ್ಯತೆಯನ್ನು. ಜರಿ ಕೆಲಸ, ವಿನ್ಯಾಸಗಳನ್ನು ಅವಲಂಬಿಸಿ). ಸೀರೆಗೆ ಅಗತ್ಯವಿರುವ ವಿನ್ಯಾಸವನ್ನು ಮೊದಲು ಕಂಪ್ಯೂಟರ್‌ನಲ್ಲಿ ರಚಿಸಲಾಗುತ್ತದೆ. ನಂತರ ಅದನ್ನು ಕಾರ್ಡ್‌ನಲ್ಲಿ ಪಂಚ್ ಮಾಡಿ, ಆ ಬಳಿಕ ಜ್ಯಾಕರ್ಡ್‌ನಲ್ಲಿ ಜೋಡಿಸಲಾಗುತ್ತದೆ. ಜ್ಯಾಕರ್ಡ್ ಯುಗಕ್ಕೆ ಮುನ್ನ ಕೈಮಗ್ಗಗಳಲ್ಲಿ ಡಾಬಿ ಮತ್ತು ಜಾಲಿ ತಂತ್ರಗಳನ್ನು ಬಳಸಿ ಇಂಥ ವಿನ್ಯಾಸಗಳನ್ನು ನೇಯಲಾಗುತಿತ್ತು.

### ಚೆಲುವಿನ ಮೀನಾ ಸ್ಪರ್ಶ!

'ಮೀನಾಕರಿ ಇದು ಅತಿ ಹೆಚ್ಚು ಬೇಡಿಕೆಯ ಸ್ಪೆಷಲ್ ಎಫೆಕ್ಟ್‌ಗಳಲ್ಲಿ ಒಂದೆನಿಸಿದೆ. ನಾನಾ ಚಿತ್ತಾರ, ವಿನ್ಯಾಸಗಳೊಂದಿಗೆ ಮೀನಾ ಕೆಲಸವು ಸೀರೆಯ ಚೆಂದವನ್ನು ಹೆಚ್ಚಿಸುತ್ತದೆ. ಈ ರೇಷ್ಮೆ ಸೀರೆಗಳು ತಮ್ಮ ವಿಶಾಲವಾದ ಗಾಢಬಣ್ಣದ ಅಂಚುಗಳಿಗೆ ಮತ್ತು ಚಿನ್ನದ ಬುಟ್ಟ ಕೆಲಸದ ಬಣ್ಣದ ವಿಶಿಷ್ಟ ಸೆರಗಿಗಾಗಿ ಪ್ರಸಿದ್ಧವಾಗಿವೆ. ಇಲ್ಲಿ ತಯಾರಿಸಲಾಗುವ ಮದುವೆ ಸೀರೆಗಳು ತುಂಬಾ ಜನಪ್ರಿಯ! ದೈನಂದಿನ ಬಳಕೆಗಾಗಿ ತಯಾರಿಸಲಾಗುವ ಸರಳ ಸೀರೆಗಳೂ ಕೂಡ ವಿಶೇಷತೆಯನ್ನು ಹೊಂದಿವೆ. ಎರಡು ಸಂಯೋಜಿತ ಬಣ್ಣಗಳಲ್ಲಿ ನೇಯ್ದ ಇವುಗಳು ಸೀರೆಗಳಿಗೆ ಬೇರೆಯೇ ಸೊಬಗನ್ನು ನೀಡುತ್ತವೆ. ಗಾಢ ವರ್ಣದ ಅಂಚು ಮತ್ತು ಸೆರಗು ಇವುಗಳ ಚೆಲುವನ್ನು ಮತ್ತಷ್ಟು ಹೆಚ್ಚಿಸುತ್ತವೆ. ಧರ್ಮಾವರಂ ಸೀರೆಗಳನ್ನು ನೋಡಿದ ಕೂಡಲೇ ಭವ್ಯ, ವೈಭವದ ನೇಯ್ಗೆ ಕಲೆಯ ಚಿತ್ರಣ ಕಣ್ಣ ಮುಂದೆ ಬರುತ್ತದೆ. ಭಾರಿ ಚಿನ್ನದ ಅಂಚುಗಳು, ಜರಿ ಕೆಲಸ, ಉಜ್ವಲ ಬಣ್ಣ ಈ ಸೀರೆಗಳ ಟ್ರೇಡ್ ಮಾರ್ಕ್! 'ಹೊಕ್ಕಿನಲ್ಲಿ ಎರಡು, ಮೂರು ಅಥವಾ ನಾಲ್ಕು ಎಳೆಗಳ ಬಳಕೆಯಿಂದಾಗಿ ಈ ಸೀರೆಗಳು ಸುದೀರ್ಘ ಬಾಳಿಕೆಗೆ ಹೆಸರು ವಾಸಿಯಾಗಿವೆ. ಈ ಸೀರೆಗಳು 50 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ಬಾಳಿಕೆ ಬರುತ್ತವೆ! ಅವಳಿ ಬಣ್ಣಗಳು ಸಂಪೂರ್ಣವಾಗಿ ವಿಭಿನ್ನ ಪರಿಣಾಮವನ್ನು ಸೃಷ್ಟಿಸುತ್ತವೆ. ಇದು ಸೀರೆಯ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಮದುವೆಗಳಂತಹ ಭವ್ಯ ಸಂದರ್ಭಗಳಿಗೆ ಇವು ಅತ್ಯಂತ ಸೂಕ್ತ ಆಯ್ಕೆ' ಎಂದು ಅಭಿಪ್ರಾಯ ಪಡುತ್ತಾರೆ ಬೆಂಗಳೂರಿನ ಕಲೆ ನೆಲೆ ಸಂಸ್ಥೆಯ ಜಾನ್ಹವಿ ಕುಲಕರ್ಣಿ. ಬೆಂಗಳೂರಿನ ಈ ಸಂಸ್ಥೆ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಸಾಂಪ್ರದಾಯಿಕ ನೇಯ್ಗೆ ಪ್ರಕಾರಗಳನ್ನು ಸಂರಕ್ಷಿಸುತ್ತಿದೆ.

'ಸರಳವಾಗಿ ಹೇಳುವುದಾದರೆ ಈ ನೇಕಾರರು ಅದ್ಭುತ. ಅವರು ಈ ಸೀರೆಗಳನ್ನು ಯಾಂತ್ರಿಕವಾಗಿ ನೇಯುವುದಿಲ್ಲ. ನೇಯ್ಗೆಯ ಜೊತೆಗೆ ಅವರ ಆಳ ಭಾವನೆಗಳೂ ಸಮ್ಮಿಳಿತವಾಗಿರುತ್ತವೆ' ಎನ್ನುತ್ತಾರೆ ಈ ಸೀರೆಗಳ ವರ್ಣ ಸಂಯೋಜನೆಗಳು ಮತ್ತು ಸಾಂಪ್ರದಾಯಿಕ ನೋಟಕ್ಕಾಗಿ ಮಾರು ಹೋದ ಗೃಹಿಣಿ ರಜನಿ ಮುಕುಂದ್. ಜವಳಿ ಎಂಜಿನಿಯರ್ ಮತ್ತು ವೃತ್ತಿಯಲ್ಲಿ ಗ್ರಾಫಿಕ್ ಡಿಸೈನರ್ ಆಗಿರುವ ಕೋಕಿಲಾ ರವಿ ಅವರು ಆಧುನಿಕ ಸೃಜನಶೀಲ ವಿನ್ಯಾಸಗಳು ಮತ್ತು ಮೀನಾ ಕೆಲಸಕ್ಕಾಗಿ ಈ ಸೀರೆಗಳನ್ನು ಇಷ್ಟಪಡುತ್ತಾರೆ. ಇಲ್ಲಿನ ಸಾಂಪ್ರದಾಯಿಕ ಪಾವಡಾ (ಲೆಹೆಂಗಾ ದಾವಣಿ) ಯುವತಿಯರ ಅಚ್ಚುಮೆಚ್ಚು. ಇತ್ತೀಚಿನ ದಿನಗಳಲ್ಲಿ ಪಾವಡಾ ವಸ್ತ್ರವನ್ನು ಟಾಪ್ ಮತ್ತು ಚೂಡಿದಾರ್‌ಗಳ ತಯಾರಿಕೆಯಲ್ಲೂ ಬಳಸಲಾಗುತ್ತಿದೆ! ದೇಶದೆಲ್ಲೆಡೆ ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಎಲ್ಲ ವರ್ಗದ ಜನರ ಅಗತ್ಯಗಳನ್ನು ಪೂರೈಸುವ ಮೂಲಕ ಈ ಸೀರೆಗಳು ತಮ್ಮದೇ ಆದ ಛಾಪನ್ನು ಮೂಡಿಸಿವೆ.

ಧರ್ಮಾವರಂ ವೈಭವಯುತ ರೇಷ್ಮೆ ವಸ್ತ್ರಗಳಿಗೆ ಹೆಸರುವಾಸಿಯಾದ ಆಂಧ್ರಪ್ರದೇಶದ ಒಂದು ಪುಟ್ಟ ಪಟ್ಟಣ! ಜಿಲ್ಲಾ ಮುಖ್ಯ ಕೇಂದ್ರ ಅನಂತಪುರದಿಂದ ಸುಮಾರು 40 ಕಿ.ಮೀ ದೂರದಲ್ಲಿರುವ ಧರ್ಮಾವರಂಗೆ ಈ ಹೆಸರು ಬಂದಿದ್ದು ರಾಜ ಕ್ರಿಯಾಶಕ್ತಿ ಒಡೆಯರ್ ಅವರ ತಾಯಿ ಧರ್ಮಾಂಬ ಅವರಿಂದ. ಕೆಲಕಾಲ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್‌ರ ಆಳ್ವಿಕೆಗೂ ಒಳಪಟ್ಟಿದ್ದ ಈ ಪಟ್ಟಣವನ್ನು ನಂತರ ಬ್ರಿಟಿಷರು ವಶಪಡಿಸಿಕೊಂಡರು.

ಧರ್ಮಾವರಂನ ರೇಷ್ಮೆ ಸೀರೆಗಳ ಸೊಬಗಿನ ವಿನ್ಯಾಸಗಳ ಪ್ರತಿಬಿಂಬವನ್ನು ಹಿಂದುಪುರದ ಹತ್ತಿರದಲ್ಲಿರುವ ಐತಿಹಾಸಿಕ ಲೇಪಾಕ್ಷಿ ದೇವಾಲಯದ ಛಾವಣಿಯ ಕುಸುರಿ ಕೆತ್ತನೆಗಳಲ್ಲಿ ನಾವು ಸ್ಪಷ್ಟವಾಗಿ ಕಾಣಬಹುದು. ಆರ್ಥಿಕ, ಸಾಮಾಜಿಕ ಮತ್ತು ನೈಜ ಪರಿಭಾಷೆಯಲ್ಲಿ ಹೇಳುವುದಾದರೆ ಧರ್ಮಾವರಂ ಅಪ್ಪಟ ನೇಕಾರರ ಪಟ್ಟಣ. ವರ್ಷವಿಡೀ ಮಳೆರಾಯನ ಬರುವಿಕೆಗಾಗಿ ಚಾತಕ ಪಕ್ಷಿಯಂತೆ ಕಾಯುವ ಸ್ಥಳೀಯರಿಗೆ ಕೃಷಿಯನ್ನು ಬಿಟ್ಟರೆ ನೇಯ್ಗೆಯೇ ಮುಖ್ಯ ಕಸುಬು. ಇಲ್ಲಿನ ದೈನಂದಿನ ಜನಜೀವನದಲ್ಲಿ ರೇಷ್ಮೆಯದ್ದೇ ಪಾರುಪತ್ಯ. ಹಾಗಾಗಿ, ಇಲ್ಲಿನ ಹೆಚ್ಚಿನ ಬೀದಿಗಳು ಯಾವಾಗಲೂ ಸಗಟು ಮತ್ತು ಚಿಲ್ಲರೆ ರೇಷ್ಮೆ ಮಾರಾಟಗಾರರು ಮತ್ತು ಖರೀದಿದಾರರಿಂದ ತುಂಬಿ ತುಳುಕುತ್ತವೆ. ■

